# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**

**ಪಿಎಸ್ಐ ಪತ್ರಿಕೆ – 1**

**ಪ್ರಶ್ನೆಗಳು**

ನೊಂದಣಿ ಸಂಖ್ಯೆ :

**ಅಂಕಗಳು : 100**

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

ಹೆಸರು :

ಮೊಬೈಲ್ ನಂ :

## ಭಾಗ – I

ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.

1. ದೇಶದ ಅಭಿವೃದ್ಧಿಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ಪಾತ್ರ ಹಾಗೂ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ವಿಶ್ಲೇಷಿಸಿ

ಅಥವಾ

2. 'ಬಾಲ್ಯ ವಿವಾಹವೊಂದು ಸಾಮಾಜಿಕ ಪಿಡುಗು' ಇದು ಮಹಿಳೆಯರ ಜೀವನದ ಮೇಲೆ ಬೀಳುವ ಪರಿಣಾಮ ಹಾಗೂ ಮದುವೆ ವಯಸ್ಸಿನ ಇತಿಮಿತಿ ಕುರಿತು ಇತ್ತೀಚಿನ ಕಾನೂನು ಹಾಗೂ ಸಮಿತಿಗಳ ಕುರಿತು ವಿಮರ್ಶಿಸಿರಿ.

ಅಥವಾ

3. 'ವಿಶ್ವಶಾಂತಿಯ ಧ್ಯೋತಕವಾಗಿರುವ' ಭಾರತವು ವಿಶ್ವದ ಇತರೆ ರಾಷ್ಟ್ರಗಳೊಂದಿಗೆ ಹೊಂದಿರುವ ಸಂಬಂಧ ಹಾಗೂ ವಿಶ್ವಸಂಸ್ಥೆಯಲ್ಲಿ ಭಾರತದ ಪಾತ್ರ ಕುರಿತು ಚರ್ಚಿಸಿರಿ

ಅಥವಾ

4. ಪ್ರಾದೇಶಿಕ ಅಸಮತೋಲನ ಕುರಿತು ವಿಮರ್ಶಾತ್ಮಕವಾಗಿ ಚರ್ಚಿಸಿರಿ

ಅಥವಾ

5. ಭೂಸುಧಾರಣೆ ಕಾಯ್ದೆ ಕುರಿತು ಇತ್ತೀಚಿನ ತಿದ್ದುಪಡಿಗಳು ಹಾಗೂ ಅದರ ಧ್ಯೇಯೋದ್ಧೇಶಗಳ ಕುರಿತು ಚರ್ಚಿಸಿರಿ

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಆಧುನಿಕ ಪರೋಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳ ಪಾತ್ರ ಅತ್ಯಂತ ಮಹತ್ವರವಾದುದು. ಈ ವ್ಯವಸ್ಥೆಯಲ್ಲಿ ಪ್ರಜೆಗಳು ಚುನಾವಣೆಗಳಲ್ಲಿ ಮತದಾನದ ಮೂಲಕ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಪರೋಕ್ಷ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ನಿಯಿತ ಕಾಲಿಕ ಚುನಾವಣೆಗಳ ಮೂಲಕ ಸರ್ಕಾರವನ್ನು ರಚಿಸುತ್ತಾರೆ. ಪ್ರಜೆಗಳು ಜನವಿರೋಧಿ ಸರ್ಕಾರವನ್ನು ಚುನಾವಣೆಯ ಮೂಲಕ ಅಧಿಕಾರದಿಂದ ಉಚ್ಛಾಟಿಸುತ್ತಾರೆ. ಹೀಗೆ ಚುನಾವಣೆಯು ಪ್ರಜೆಗಳಿಗೆ ಒಂದು ಸರ್ಕಾರವನ್ನು ಸ್ಥಾಪಿಸುವ ಹಾಗೂ ಅಧಿಕಾರದಿಂದ ಉಚ್ಛಾಟಿಸುವ ರಾಜಕೀಯ ಅಧಿಕಾರವನ್ನು ನೀಡುತ್ತದೆ. ಇದನ್ನು ರಾಜ್ಯಶಾಸ್ತ್ರದ ಪರಿಭಾಷೆಯಲ್ಲಿ 'ರಾಜಕೀಯ ಪರಮಾಧಿಕಾರ' ಎಂದು ಕರೆಯುತ್ತೇವೆ. ಚುನಾವಣೆಯು ರಾಜಕೀಯ ವ್ಯವಸ್ಥೆಯನ್ನು ನಿಯಂತ್ರಿಸಲು ಪ್ರಜೆಗಳ ಕೈಯಲ್ಲಿರುವ ಶಕ್ತಿಶಾಲಿ ಅಸ್ತ್ರವಾಗಿದೆ. ಆದ್ದರಿಂದಲೇ ಪ್ರಜಾಪ್ರಭುತ್ವದಲ್ಲಿ "ಮತ ಪತ್ರವು ತುಪಾಕಿಯ ಗುಂಡಿಗಿಂತ ಶಕ್ತಿಶಾಲಿಯಾದುದು" **(Ballot is mightier than the Bullet)** ಎಂಬ ಮಾತು ಪ್ರಚಲಿತದಲ್ಲಿದೆ. ಚುನಾವಣೆಯು ಜನತಾ ಪರಮಾಧಿಕಾರದ ಪರಿಕಲ್ಪನೆಯನ್ನು ಸಾಕಾರಗೊಳಿಸುತ್ತದೆ. ಚುನಾವಣೆಯಲ್ಲಿ ಮತದಾರರ ವರ್ಗ (ಇಟಜಥಿಣಠಡಿಚಿಣಜ) ವು ಪ್ರಮುಖ ಪಾತ್ರ ವಹಿಸುತ್ತದೆ. ಮತ ನೀಡುವ ಹಕ್ಕನ್ನು ಹೊಂದಿರುವ ವ್ಯಕ್ತಿಗಳ ಸಮೂಹವನ್ನು ಮತದಾರರ ವರ್ಗ ಎಂದು ಕರೆಯಲಾಗುತ್ತದೆ.

ಚುನಾವಣೆಯು ಪ್ರಜೆಗಳಿಗೆ ಪರೋಕ್ಷವಾಗಿ ರಾಜ್ಯಾಡಳಿತದಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ. ಇದರಿಂದ ಸರ್ಕಾರವನ್ನು ಶಾಂತಿಯುತವಾಗಿ ಬದಲಾವಣೆ ಮಾಡಲು ಸಾಧ್ಯ. ಪ್ರಜಾಪ್ರಭುತ್ವ ಮತ್ತು ಚುನಾವಣೆಗಳ ನಡುವೆ ಬೇರ್ಪಡಿಸಲಾಗದ ಸಂಬಂಧವಿದೆ. ಚುನಾವಣೆ ಇಲ್ಲದ ಪ್ರಜಾಪ್ರಭುತ್ವವನ್ನು ಊಹಿಸಲು ಸಾಧ್ಯವಾಗುವುದಿಲ್ಲ. ಪರೋಕ್ಷ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳ ಮೂಲಕ ಆಯ್ಕೆಯಾದ ಜನತಾ ಪ್ರತಿನಿಧಿಗಳು ಪ್ರಜೆಗಳ ಪರವಾಗಿ ಆಡಳಿತ ನಡೆಸುತ್ತಾರೆ. ಆದ್ದರಿಂದ ಚುನಾವಣೆಯನ್ನು ಪ್ರಜಾಪ್ರಭುತ್ವದ ಆಧಾರಸ್ಥಂಭ ಎಂದು ಕರೆಯಲಾಗುತ್ತದೆ. ಚುನಾವಣೆಗಳು ಸಾರ್ವಜನಿಕ ಅಭಿಪ್ರಾಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಮಾಧ್ಯಮಗಳು ಹೌದು. ಇದು ಜನರಿಗೆ ರಾಜಕೀಯ ಶಿಕ್ಷಣವನ್ನು ನೀಡಿದರೆ ಪ್ರಜಾಪ್ರತಿನಿಧಿಗಳಿಗೆ ರಾಜಕೀಯ ತರಬೇತಿಯನ್ನು ನೀಡುತ್ತದೆ. ಮುಕ್ತ ಮತ್ತು ನಿರ್ಭೀತ ಚುನಾವಣೆಗಳು ಆರೋಗ್ಯವಂತ ಪ್ರಜಾಪ್ರಭುತ್ವದ ಲಕ್ಷಣಗಳಾಗಿದ್ದು ವ್ಯಕ್ತಿಯ ಪ್ರತಿಷ್ಠೆ ಹಾಗೂ ಮೌಲ್ಯವನ್ನು ಹೆಚ್ಚಿಸುತ್ತವೆ.

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – III

**III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.**

**Translate the following paragraph from English to Kannada.**

**Integrated economic planning and engineering or technical criteria based on calculation performed in-kind, thereby producing a different economic mechanism that functions according to different economic laws and dynamics than those of capitalism. A non-market socialist system eliminates the inefficiencies and crises traditionally associated with capital accumulation and the profit system in capitalism. The socialist calculation debate, originated by the economic calculation problem, concerns the feasibility and methods of resource allocation for a planned socialist system. By contrast, market socialism retains the use monetary prices factor markets an in some cases the profit motive, with respect to the operation of socially owned enterprises and the allocation of capital goods between them.**

**Profits generated by these firms would be controlled directly by the workforce of each firm or accrue to society at large in the form of a social dividend.**

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

ಮತೀಯ ತೀರ್ಪಿನ ವಿರುದ್ಧ ಗಾಂಧೀಜಿಯವರು ಕೈಗೊಂಡ ಉಪವಾಸ ಸತ್ಯಾಗ್ರಹವನ್ನು ಸರ್ಕಾರ ವಿರೋಧಿಸಿತು. ಬ್ರಿಟಿಷ್ ಸರ್ಕಾರವು ನಿರ್ಧಾರವನ್ನು ಬದಲಾಯಿಸಲಾಗುವುದಿಲ್ಲ ಎಂದು ಹೇಳಿದ್ದಲ್ಲದೆ ಸಹಸ್ರಾರು ವರ್ಷ ಅನ್ಯಾಯಗಳಿಗೆ ತುತ್ತಾಗಿ ಕೆಲವು ಅಸಹನೀಯ ನ್ಯೂನತೆಗಳನ್ನು ಅನುಭವಿಸುತ್ತಿರುವ ನಿಮ್ಮ ವರ್ಗಕ್ಕೆ ಕೆಲವು ವಿಶಿಷ್ಟ ಕ್ಷೇತ್ರಗಳಲ್ಲಿ ತಮ್ಮ ಸ್ವಂತ ಪ್ರತಿನಿಧಿಗಳನ್ನು ಆರಿಸಿ ಶಾಸನಸಭೆಗಳಲ್ಲಿ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಪ್ರಭಾವಯುತವಾಗಿ ಪ್ರತಿಪಾದಿಸುವ ಅವಕಾಶ ತಪ್ಪಿಸುವ ಉದ್ದೇಶದಿಂದಲೇ ನೀವು ನಿರಶನ ಕೈಗೊಂಡು ಸಾಯುವ ನಿರ್ಧಾರ ಮಾಡಿರುತ್ತೀರಿ ಎಂದು ಆಪಾದಿಸಿತು. ಬ್ರಿಟಿಷರ ಈ ವ್ಯಾಖ್ಯಾನಕ್ಕೆ ಗಾಂಧೀಜಿಯವರು ನಿಮ್ಮ ವರ್ಗದವರಿಗೆ ಎರಡು ಕ್ಷೇತ್ರಗಳಲ್ಲಿ ಮತನೀಡುವ ಹಕ್ಕಿನಿಂದ ಅವರ ರಕ್ಷಣೆಯಾಗದು. ನಿಮ್ಮ ವರ್ಗಗಳಿಗೆ ಪ್ರತ್ಯೇಕ ಚುನಾವಣಾ ಪದ್ಧತಿಯನ್ನು ಸ್ಥಾಪಿಸುವುದರಲ್ಲಿ, ಹಿಂದೂ ಧರ್ಮವನ್ನೇ ನಾಶಮಾಡಲು ವಿಷವನ್ನು ಒಳಕ್ಕೆ ಚುಚ್ಚಲಾಗುತ್ತಿದೆ. ನಿಮ್ಮ ವರ್ಗಕ್ಕೆ ಎಲ್ಲರಿಗಿಂತಲೂ ಹೆಚ್ಚಿನ ಪ್ರಾತಿನಿಧ್ಯ ಕೊಡಲು ನಾನು ಅಡ್ಡಿಯಾಗಲಾರೆ ಆದರೆ ಹಿಂದೂ ಸಮಾಜದಿಂದ ಅವರನ್ನು ಶಾಸನಬದ್ಧವಾಗಿ ಬೇರ್ಪಡಿಸುವುದನ್ನು ವಿರೋಧಿಸುತ್ತೇನೆ ಎಂದು ಅಭಿಪ್ರಾಯಪಟ್ಟರು.

ಗಾಂಧೀಜಿಯವರ ಉಪವಾಸದ ನಿರ್ಧಾರವು ಜನತೆಯನ್ನು ಬಿಡಿದೆಬ್ಬಿಸಿತು. ದೇಶದಲ್ಲೆಲ್ಲಾ ಪ್ರಧಾನಿಯ ನಿರ್ಣಯವನ್ನು ಬದಲಿಸುವಂತೆ ಪ್ರದರ್ಶನಗಳಾದವು. ನಿಮ್ಮ ವರ್ಗದ ನಾಯಕ ಎಂ.ಸಿ. ರಾಜಾ ಈ ಜಾತಿ ಪ್ರತ್ಯೇಕತಾ ನಿರ್ಣಯವನ್ನು ಖಂಡಿಸಿ ಸರ್ವರೂ ಒಟ್ಟುಗೂಡಿ ಗಾಂಧೀಜಿಯ ಪ್ರಾಣವನ್ನುಳಿಸುವಂತೆ ಕರೆಕೊಟ್ಟರು. ಡಾ॥ ಅಂಬೇಡ್ಕರರು ಮಾತ್ರ “ಇದೊಂದು ರಾಜಕೀಯ ತಂತ್ರ” ವೆಂದು ಕರೆದರು. ಸೆಪ್ಟೆಂಬರ್ 14 ರಂದು ಅಲಹಾಬಾದಿನ ದೇವಸ್ಥಾನಗಳಲ್ಲೆಲ್ಲ ಅಸ್ಪೃಶ್ಯರಿಗೆ ಪ್ರವೇಶ ಉಂಟೆಂದು ಘೋಷಿಸಲಾಯಿತು. ದೇಶದಾದ್ಯಂತ ಸೆಪ್ಟೆಂಬರ್ 19 ನೇ ದಿನವನ್ನು ಪ್ರತಿಭಟನಾ ದಿನವನ್ನಾಗಿ ಆಚರಿಸಿ ನಿಮ್ಮ ವರ್ಗದ ಪ್ರತ್ಯೇಕ ಚುನಾವಣಾ ವ್ಯವಸ್ಥೆಯ ನಿರ್ಣಯವನ್ನು ಪ್ರಧಾನಿ ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಲಾಯಿತು. ಸೆಪ್ಟೆಂಬರ್ 20 ರಂದು ದೇಶಾದಾದ್ಯಂತ ಲಕ್ಷಾಂತರ ಜನರು ಉಪವಾಸ ಮಾಡಿ ಗಾಂಧೀಜಿಯವರ ಪ್ರಾಣ ಉಳಿಯಲಿ ಎಂದು ಪ್ರಾರ್ಥನೆ ಸಲ್ಲಿಸಿದರು. ಗಾಂಧೀಜಿಯವರ ಆದೇಶದಂತೆ ಅಸ್ಪ್ರಶ್ಯತೆಯನ್ನು ತೊಡೆದುಹಾಕಲು ಸಭೆಗಳನ್ನು ನಡೆಸಿ ಜನರು ಪ್ರತಿಜ್ಞೆ ಕೈಗೊಂಡರು. ಅಲಹಾಬಾದ್, ಕಾಶಿ ಮುಂತಾದ ಪ್ರಸಿದ್ಧ ಯಾತ್ರಸ್ಥಳಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶ ನೀಡುವ ತೀರ್ಮಾನ ಪ್ರಕಟಿಸಲಾಯಿತು. ಅನೇಕ ಊರುಗಳಲ್ಲಿ ಸವರ್ಣ ಹಿಂದೂಗಳು ಅಸ್ಪೃಶ್ಯರೆನಿಸಿಕೊಂಡವರ ಜೊತೆಯಲ್ಲಿ ಸಹಭೋಜನ ಮಾಡಿ ಸಹೋದರತ್ವ ಭಾವನೆಯನ್ನು ವಿಜೃಂಭಿಸಿದರು. ಗಾಂಧೀಜಿಯವರ ಉಪವಾಸದ ತೀರ್ಮಾನವು ಹಿಂದು ಸವರ್ಣಿಯರ ಆತ್ಮಸಾಕ್ಷಿಯನ್ನು ಬಡಿದೆಬ್ಬಿಸಿ ಅಸ್ಪೃಶ್ಯರ ಬಗ್ಗೆ ಸವರ್ಣಿಯರ ಭಾವನೆ ಬದಲಾಗುವಂತೆ ಮಾಡಿತು.